# ಯೂರೋಪ್ ಕ್ಷಿತಿಜ ಬೆಳಗಿದ ತಾರೆ

**ಪ್ರವೀಣ ಕುಲಕರ್ಣಿ**

ಗ್ಲೆಂಡಾ ಜಾಕ್ಸನ್ – ಸಿನಿಲೋಕ ಮಾತ್ರವಲ್ಲ, ಇಡೀ ಜಗತ್ತೇ ಕಣ್ಣರಳಿಸಿ ನೋಡುವಂತಹ ಹೆಸರು. ಅವರ ಸಾಧನೆ–ಬದುಕಿನ ಗ್ರಾಫೇ ಅಂತಹದ್ದು. ಎರಡು ಬಾರಿ ಆಸ್ಕರ್ ಪ್ರಶಸ್ತಿಗೆ ಭಾಜನರಾಗಿದ್ದ ಈ ನಟಿ, ತಮ್ಮ ವಯಸ್ಸಿನ 50ರ ಗಡಿ ದಾಟಿದ ಬಳಿಕ ಬ್ರಿಟಿಷ್ ಸಂಸತ್ತು ಪ್ರವೇಶಿಸುವ ಸಲುವಾಗಿ ಸಿನಿಮಾ ವೃತ್ತಿಯನ್ನೇ ಬಿಟ್ಟುಕೊಟ್ಟವರು. ಮತ್ತೆ ಬಣ್ಣದ ಹುಚ್ಚು ಹಚ್ಚಿಕೊಂಡು 80ರ ಹರೆಯದಲ್ಲಿದ್ದಾಗ ಸಿನಿಮಾ ಕ್ಷೇತ್ರಕ್ಕೆ ಧುಮುಕಿದವರು. ಬದುಕಿರುವಾಗಲೇ ದಂತಕಥೆಯಾದವರು. ಮೊನ್ನೆ ಮೊನ್ನೆ ಅವರು ನಿಧನರಾದಾಗ ಪರಂಪರೆಯ ದೊಡ್ಡ ಕೊಂಡಿಯೊಂದು ಕಳಚಿಹೋಯಿತು ಎಂದು ಇಡೀ ಯೂರೋಪ್ ಕಣ್ಣೀರು ಹಾಕಿದ್ದು ಇದೇ ಕಾರಣಕ್ಕೆ.

ಗ್ಲೆಂಡಾ ಎಂತಹ ಕ್ರಿಯಾಶೀಲರಾಗಿದ್ದ ಸಾಧಕಿ ಎಂದರೆ ಸಾವಿನ ಕೆಲವೇ ವಾರಗಳ ಮುಂಚಿನವರೆಗೂ ಬಣ್ಣ ಹಚ್ಚಿ ನಟಿಸಿದವರು. ನಟನೆಯ ರಂಗಮಂಚವೇ ಆಗಿರಲಿ, ಬದುಕಿನ ರಂಗಮಂಚವೇ ಆಗಿರಲಿ ಎಲ್ಲವನ್ನೂ ಅದಮ್ಯವಾಗಿ ಪ್ರೀತಿಸಿದವರು ಆಕೆ. ನೋವು, ಹಾಸ್ಯ, ಸಿಟ್ಟು, ಪ್ರೀತಿ... ಹೀಗೆ ಅವರ ಬದುಕು ಮತ್ತು ನಟನೆಯಲ್ಲಿ ಎಲ್ಲ ರಸಗಳ ಮಹಾಸಂಗಮವಾದುದನ್ನು ಕಾಣಬಹುದು. 'ನಾನು ಅಪಾಯಗಳನ್ನು ಪ್ರೀತಿಸುತ್ತೇನೆ. ಎಂತಹ ರಿಸ್ಕ್ ತೆಗೆದುಕೊಳ್ಳಲೂ ಸಿದ್ಧ' ಎನ್ನುವುದು ಅವರ ಫಿಲಾಸಫಿಯಾಗಿತ್ತು. 'Women in Love' ಮತ್ತು 'A Touch of Class' ಚಿತ್ರಗಳ ಪಾತ್ರಗಳು ಅವರಿಗೆ ಆಸ್ಕರ್ ಪ್ರಶಸ್ತಿಯನ್ನು ತಂದುಕೊಟ್ಟಿದ್ದವು.

ಲೇಬರ್ ಪಕ್ಷವನ್ನು ಸೇರಿದ ಗ್ಲೆಂಡಾ, ಸಂಸದೆಯಾಗಿ ಲಂಡನ್ ನಗರವನ್ನು ಪ್ರತಿನಿಧಿಸಿದ್ದೂ ಉಂಟು. ಮುಂದೆ ಬ್ರಿಟನ್ ಸರ್ಕಾರದ ಸಾರಿಗೆ ಮಂತ್ರಿಯೂ ಆಗಿದ್ದ ಅವರು, ಲಂಡನ್ ಮೇಯರ್ ಆಗುವ ಮಹತ್ವಾಕಾಂಕ್ಷೆ ಹೊತ್ತು, ಮಂತ್ರಿ ಪದವಿಗೆ ರಾಜೀನಾಮೆ ನೀಡಿದ್ದರು. ಆದರೆ, ಮೇಯರ್ ಆಗುವ ಅವರ ಕನಸು ಈಡೇರಲಿಲ್ಲ. ನಮ್ಮ ರಾಜಕಾರಣಿಗಳು ಎಷ್ಟೇ ವಯಸ್ಸಾದರೂ ಮತ್ತೆ ಸ್ಪರ್ಧಿಸುವ ಆಸಕ್ತಿ ತೋರಿ, ಟಿಕೆಟ್‌ಗಾಗಿ ಏನೆಲ್ಲ ಲಾಬಿ ಮಾಡುತ್ತಾರೆ ಎನ್ನುವುದನ್ನು ನಾವು ಇತ್ತೀಚಿನ ವಿಧಾನಸಭಾ ಚುನಾವಣೆಯಲ್ಲೂ ಕಂಡಿದ್ದೇವೆ. ಆದರೆ, ಚುನಾವಣೆಯಲ್ಲಿ ಸ್ಪರ್ಧಿಸಲೇಬೇಕೆಂಬ ತೀವ್ರ ಒತ್ತಡ ಬಂದರೂ ನನಗೆ ವಯಸ್ಸಾಗಿದೆ, ಇನ್ನು ನಾನು ಸ್ಪರ್ಧಿಸುವುದಿಲ್ಲ ಎಂದು ಖಂಡತುಂಡವಾಗಿ ಹೇಳಿ, ರಾಜಕೀಯದಿಂದಲೇ ದೂರ ಸರಿದಿದ್ದರು ಗ್ಲೆಂಡಾ. ನಟನೆಗೆ ವಯಸ್ಸಿನ ಹಂಗಿಲ್ಲ ಎಂದೂ ಸಾರಿದ ಅವರು 87ರ ಇಳಿವಯಸ್ಸಿನಲ್ಲೂ ಚಿತ್ರಜಗತ್ತಿಗೆ ತಮ್ಮನ್ನು ತಾವು ಸಮರ್ಪಿಸಿಕೊಂಡಿದ್ದರು. ಭಾವನಾತ್ಮಕ ಪಾತ್ರಗಳಿಗೆ ಜೀವ ತುಂಬುತ್ತಿದ್ದ, ಪಾತ್ರಗಳನ್ನೇ ತಮ್ಮ ಮೇಲೆ ಆವಾಹಿಸಿಕೊಳ್ಳುತ್ತಿದ್ದ ಗ್ಲೆಂಡಾ, ಗತಕಾಲದ ದೈತ್ಯಪ್ರತಿಭೆಗಳ ವಿರಾಟ್‌ರೂಪಕ್ಕೆ ಸಾಕ್ಷಿಯಾದವರು.

ಗ್ಲೆಂಡಾ ಅವರ ಅಭಿಮಾನಿಗಳು ಅವರ ಭಾವತೀವ್ರತೆಯ ಅಭಿನಯದ 'Stevie' (1978), 'Sunday Bloody Sunday' (1971), 'Strange Interlude' (1985) ಚಿತ್ರಗಳನ್ನು ನೆನಪಿಸಿಕೊಳ್ಳುತ್ತಾರೆ. 'Lear' ಸಿನಿಮಾ ನೋಡಿದ ಯಾರೂ ಅವರ ಅಭಿಯಾನಿಯಾಗದೇ ಇರರು. ಪುರುಷ ಪಾತ್ರದಲ್ಲೂ ಮಿಂಚಿದ ನಟಿಯಾಗಿದ್ದರು ಆಕೆ. ಜಗತ್ತಿನ ಅತ್ಯಂತ ಸಿರಿವಂತ ನಟಿಯರಲ್ಲಿ ಒಬ್ಬರೆನಿಸಿದ್ದ ಗ್ಲೆಂಡಾ ಅವರ ಬಾಲ್ಯ ಕಡುಬಡತನದಿಂದ ಕೂಡಿತ್ತು. ಅವರ ತಂದೆ ಇಟ್ಟಿಗೆ ತಯಾರಿಸುವ ಕಾರ್ಮಿಕರಾಗಿದ್ದರು. ತಾಯಿ ಮನೆಗೆಲಸಕ್ಕೆ ಹೋಗುತ್ತಿದ್ದರು. ಗ್ಲೆಂಡಾ ಅವರಿಗೆ ಮೂವರು ಅಕ್ಕಂದಿರು ಬೇರೆ ಇದ್ದರು. ಮನೆಯಲ್ಲೊಂದು ಶೌಚಾಲಯವೂ ಇಲ್ಲದೆ ಬಯಲು ಬಹಿರ್ದೆಸೆಗೆ ಹೋಗಬೇಕಿತ್ತು. 'ಎಷ್ಟೋ ಬಾರಿ ಮೇಣದಬತ್ತಿಯ ಮೇಣ ನಮ್ಮ ಪಾಲಿಗೆ ಚ್ಯೂಯಿಂಗ್ ಗಮ್ ಆಗಿತ್ತು ಗೊತ್ತೆ' ಎಂದು ಗ್ಲೆಂಡಾ ಅವರೊಮ್ಮೆ ನಸುನಕ್ಕಿದ್ದರು. ಆ ನಗುವಿನ ಹಿಂದೆ ಅಪಾರ ನೋವು ಅಡಗಿರುವುದು ಎಂಥವರಿಗೂ ಗೊತ್ತಾಗುತ್ತಿತ್ತು.



ಜಾಣ ವಿದ್ಯಾರ್ಥಿನಿಯಾಗಿದ್ದ ಗ್ಲೆಂಡಾ, ಅರ್ಧಕ್ಕೆ ನಿಲ್ಲಿಸಿದ್ದ ಓದನ್ನು ಸ್ಕಾಲರ್‌ಷಿಪ್ ಪಡೆದು ಮುಗಿಸಿದ್ದರು. ಫಾರ್ಮಸಿಯೊಂದರಲ್ಲಿ ಕೆಲಸ ಮಾಡುತ್ತಾ, ಕುಟುಂಬಕ್ಕೆ ನೆರವಾಗುತ್ತಾ, ರಂಗತಂಡವೊಂದನ್ನು ಸೇರಿ ರಂಗ ಚಟುವಟಿಕೆಗಳಲ್ಲೂ ಅವರು ಕ್ರಿಯಾಶೀಲರಾಗಿದ್ದರು. ಆ ಅನುಭವ ಅವರನ್ನು ಯೂರೋಪಿನ ಅತ್ಯಂತ ಯಶಸ್ವಿ ನಟಿಯರಲ್ಲಿ ಒಬ್ಬರಾಗುವ ಮಟ್ಟಕ್ಕೆ ಬೆಳೆಸಿತು. 'ಚಿತ್ರಕಥೆ ಬರೆಯುವಾಗ ಮಹಿಳೆಯರ ಪಾತ್ರದ ಕುರಿತು ಒಂದು ರೀತಿಯ ಅಸಡ್ಡೆ ಹಿಂದೆಯೂ ಇತ್ತು. ಈಗಲೂ ಇದೆ' ಎಂದು ಅವರು ಹೇಳಿದ್ದನ್ನು ಓದಿದ ನೆನಪು.

ಬ್ರಿಟಿಷ್ ಸಂಸತ್ತಿನ ಕಲಾಪದ ಇತಿಹಾಸ ತಿರುವಿ ಹಾಕಿದರೆ ಗ್ಲೆಂಡಾ, ಸಮಾಜವನ್ನು ಕಾಡುವ ವಿಷಯಗಳ ಕುರಿತು ಎಷ್ಟೊಂದು ಗಟ್ಟಿಧ್ವನಿಯಲ್ಲಿ ಮಾತನಾಡಿದ್ದರು ಎನ್ನುವುದು ಗೊತ್ತಾಗುತ್ತದೆ. ಮನೆಯಿಲ್ಲದವರಿಗೆ ವಸತಿ ಸೌಲಭ್ಯ ಕಲ್ಪಿಸಬೇಕೆಂದು, ಮಹಿಳೆಯರಿಗೆ ಅವರ ಹಕ್ಕುಗಳನ್ನು ನೀಡಬೇಕೆಂದು, ಸಾರಿಗೆ ವ್ಯವಸ್ಥೆಯಲ್ಲಿ ಅಂಗವಿಕಲರಿಗೆ ವಿಶೇಷ ಸೌಲಭ್ಯ ಕಲ್ಪಿಸಬೇಕೆಂದು ಅವರು ಪಟ್ಟು ಹಿಡಿದು, ವಾದಿಸಿದ್ದರು. ಸಮಾಜವನ್ನು, ಬದುಕನ್ನು ಅದಮ್ಯವಾಗಿ ಪ್ರೀತಿಸಿದ್ದ ಗ್ಲೆಂಡಾ, ಈಗ ಬದುಕಿಗೆ ವಿದಾಯ ಹೇಳಿದ್ದಾರೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65